ಅನುಭವ ಕಥನ

# ತೆರೆಯೋಣ ಮನೆ–ಮನ

**ನಿಮ್ಮ ಮನೆಗೆ ಶಾಲೆ–ಕಾಲೇಜು, ಶಾಪಿಂಗ್ ಮಾಲ್ ಸಮೀಪವೆ? ಆಸ್ಪತ್ರೆ ಹಾಗೂ ಬ್ಯಾಂಕ್ ಹತ್ತಿರದಲ್ಲಿದೆಯೆ? ಬಸ್ ನಿಲ್ದಾಣ ಕೂಗಳತೆ ದೂರದಲ್ಲಿದೆಯೇ? ಇದಾವುದೂ ಮನೆಗೆ ಸಮೀಪ ಇಲ್ಲದಿದ್ದರೂ ಚಿಂತೆಯಿಲ್ಲ; ನಿಮ್ಮ ಮನೆ ಶಾಂತಿ ಮತ್ತು ನೆಮ್ಮದಿಗೆ ಹತ್ತಿರವಾಗಿರಬೇಕು!**

**■ ಪಿ.ಬಿ. ಪ್ರಸನ್ನ**



ದಶಕಗಳ ಹಿಂದೆ ಈಟಿವಿ ವಾಹಿನಿಯಲ್ಲಿ ‘ಗರ್ವ’ ಎನ್ನುವ ಧಾರಾವಾಹಿ ಪ್ರಸಾರವಾಗುತ್ತಿತ್ತು. ಅದರ ಒಂದು ಕಂತಿನಲ್ಲಿ ನಾಗೇಂದ್ರ ಶಾ ಅವರು ನಿರ್ವಹಿಸಿದ ಪಾತ್ರವೊಂದರಲ್ಲಿ ಸಂಭಾಷಣೆಯೊಂದು ಹೀಗಿತ್ತು. ‘ವಾಸಕ್ಕೆ ಅಂತ ಮನೆ ಕಟ್ಟುತ್ತಾರೆ. ಆ ಮನೆಗೆ ಬೆಳಕು ಬರಲಿ ಅಂತ ದೊಡ್ಡ ಕಿಟಕಿ ಇಡುತ್ತಾರೆ. ನಂತರ ಬೆಳಕು ಹೆಚ್ಚಾಗುತ್ತದೆ ಎಂದು ಕರ್ಟನ್ ಹಾಕುತ್ತಾರೆ. ಗಾಳಿ ಬರಲು ಎಂದು ಕಿಟಕಿಗೆ ಬಾಗಿಲುಗಳನ್ನು ಇಡುತ್ತಾರೆ. ಆದರೆ ಗಾಳಿ ಹೆಚ್ಚಾಗುತ್ತದೆ ಎಂದು ಯಾವತ್ತೂ ತೆರೆಯುವುದೇ ಇಲ್ಲ’. ಮೇಲುನೋಟಕ್ಕೆ ಸ್ವಲ್ಪ ತಮಾಷೆಯಾಗಿ ಕಾಣಬಹುದಾದ ಮಾತು ಇದಾದರೂ ಇದು ಶೇಕಡ ನೂರರಷ್ಟು ಸತ್ಯವಾದ ಮಾತಾಗಿದೆ.

ಅಕ್ಷರಸ್ಥ ವರ್ಗ ನಗರ–ಮಹಾನಗರಗಳಲ್ಲಿ ಹೀಗೆ ಹಲವು ರೀತಿಯ ಮನೆಗಳಲ್ಲಿ ವಾಸವಾಗಿರುತ್ತಾರೆ. ಆದರೆ ಮನೆಯನ್ನು ಮುಕ್ತವಾಗಿ ಪೂರ್ವಗ್ರಹ ಪೀಡಿತರಾಗದೆ ಎಲ್ಲರಿಗೂ ತೆರೆದಿಡುತ್ತಾರೆಯೇ? ಎಂದು ಪ್ರಶ್ನಿಸಿದರೆ ಚಿತ್ರ ವಿಚಿತ್ರದ ಅನುಭವಗಳನ್ನು ಎಲ್ಲರೂ ಹೇಳಬಹುದು.

ಕೆಲವು ದಿನಗಳ ಹಿಂದಿನ ಮಾತು. ಒಂದು ಕೆಲಸದ ನಿಮಿತ್ತ ಬೆಂಗಳೂರಿಗೆ ಹೋಗಿದ್ದೆ. ಆ ಕೆಲಸ ಮುಗಿದಾದ ಮೇಲೆ ಸಂಜೆಯ ಹೊತ್ತು ಬಂಧುಗಳ ಒಬ್ಬರ ಮನೆಗೆ ಹೋಗೋಣ ಎಂದು ಯೋಚಿಸಿದೆ. ಅವರು ಊರಿಗೆ ಬಂದಾಗಲೆಲ್ಲ ‘ನೀನು ಬೆಂಗಳೂರಿಗೆ ಬಂದಾಗ ನಮ್ಮ ಮನೆಗೆ ಬರದೇ ಹೋಗುತ್ತಿ. ಒಂದು ಸಲವಾದರೂ ಬಂದು ಹೋಗಬಾರದೇ?’ ಎಂದು ಕೇಳುತ್ತಿದ್ದರು. ಹಾಗಾಗಿ ನಾನು ಆ ಬಾರಿ ಅವರನ್ನು ಭೇಟಿಯಾಗೋಣ ಎಂದು ಯೋಚಿಸಿದೆ. ವಿಳಾಸ ಸರಿಯಾಗಿ ಗೊತ್ತಿದ್ದುದರಿಂದ ಸಂಜೆಯ ಹೊತ್ತು ಹೇಳದೆಯೇ ನಾನು ಅವರ ಮನೆಗೆ ಹೋದೆ. ಕರೆ ಗಂಟೆ ಒತ್ತಿದಾಗ ಅವರ ಹೆಂಡತಿ ಬಾಗಿಲು ತೆರೆದರು. ನನ್ನನ್ನು ನೋಡಿ ಒಮ್ಮೆ ನಗುತ್ತಾ ಸ್ವಾಗತಿಸಿದರೂ, ಕೆಲಹೊತ್ತಿನಲ್ಲಿ ಅವರ ಮುಖವೇಕೋ ವಿವರ್ಣವಾಯಿತು. ಅವರ ಯಜಮಾನರು ತುಸು ಮಾತನಾಡಿದರು. ಆದರೆ ಅವರೂ ಏನೋ ಗೊಂದಲದಲ್ಲಿದ್ದಂತೆ ಕಾಣುತ್ತಿತ್ತು.

‘ಯಾಕೆ ನೀವಿಬ್ಬರೂ ನಾನು ಬಂದ ಕೂಡಲೇ ಗಲಿಬಿಲಿಗೆ ಒಳಗಾದಂತೆ ಕಾಣುತ್ತಿದ್ದೀರಿ? ನಾನು ಬಂದದ್ದು ನಿಮಗೆ ಇಷ್ಟವಾಗಲಿಲ್ಲವೇ?’ ಎಂದು ನೇರವಾಗಿ ಕೇಳಿದೆ.

ಆಗ ಅವರು, ‘ಛೆ ಛೆ... ಹಾಗೇನಿಲ್ಲ. ನೀವು ಬಂದದ್ದು ಸಂತೋಷವೇ. ಮುಂದಿನ ವಾರ ಮಗಳಿಗೆ ಪರೀಕ್ಷೆ. ನಾವು ಒತ್ತಾಯ ಮಾಡಿ ಓದಿಸದೇ ಇದ್ದರೆ ಅವಳು ಪರೀಕ್ಷೆ ಚೆನ್ನಾಗಿ ಮಾಡುವುದಿಲ್ಲ. ಅದಕ್ಕಾಗಿ ಈ ವಾರ ಇಡೀ ನಾವು ಎಲ್ಲಿಗೂ ಹೊರಗೆ ಹೋಗುವುದಿಲ್ಲ. ಯಾರನ್ನೂ ಮನೆ ಒಳಗೆ ಬರಲು ಬಿಡುವುದಿಲ್ಲ ಎಂದು ನಿರ್ಧರಿಸಿದ್ದೆವು. ಹೆಚ್ಚಿನವರು ಫೋನ್ ಮಾಡಿ ಬರುತ್ತಾರೆ. ನೀವು ಹಾಗೆಯೇ ಬಂದಿರಿ. ಹಾಗಾಗಿ ನಮಗೆ ಸ್ವಲ್ಪ ಗಲಿಬಿಲಿಯಾದದ್ದು ನಿಜ’ ಎಂದರು.

ಅಷ್ಟು ಹೊತ್ತಿಗೆ ಅವರ ಮಗಳು ಒಳಗಿನ ರೂಮಿನಿಂದ ಹೊರಗೆ ಬಂದಳು. ಮುದ್ದಾದ ನಾಲ್ಕು ನಾಲ್ಕೂವರೆ ವರ್ಷದ ಹೆಣ್ಣು ಮಗು. ‘ಹಾಯ್ ಅಂಕಲ್’ ಎನ್ನುತ್ತಾ ನಗುತ್ತಾ ಬಂದಳು. ನನ್ನ ತೊಡೆ ಏರಿದಳು. ಕಿಸೆಯಲ್ಲಿದ್ದ ಚಾಕಲೇಟು ಕೊಟ್ಟೆ. ‘ಮಗಳು ಎಷ್ಟನೇ ಕ್ಲಾಸ್?’ ಎಂದು ಕೇಳಿದೆ. ಅದಕ್ಕೆ ಅವರು ‘ಎಲ್‌ಕೆಜಿ’ ಎಂದರು. ‘ಇಷ್ಟು ಸಣ್ಣ ಮಗುವಿಗೆ ಅಷ್ಟು ಒತ್ತಡ ಬೇಕಾ?’ ಎಂದು ಕೇಳಿದೆ. ‘ನೋಡಿ ಇದು ನಿಮಗೆಲ್ಲ ಅರ್ಥವಾಗುವುದಿಲ್ಲ. ಈಗಿನಿಂದಲೇ ಮಕ್ಕಳನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳದೆ ಇದ್ದರೆ ಮುಂದೆ ಚೆನ್ನಾಗಿ ಓದುವುದೇ ಇಲ್ಲ. ಪರ್ಸೆಂಟೇಜ್ ತುಂಬಾ ಮುಖ್ಯ’ ಎಂದು ತುಸು ಏರುದನಿಯಿಂದಲೇ ಹೇಳಿದರು. ಮಾತ್ರವಲ್ಲ ಮೀಸಲಾತಿ ಸಮಸ್ಯೆ, ಉದ್ಯೋಗ ಲಭ್ಯ ಇಲ್ಲದೆ ಇರುವುದು ಬೇರೆ ಏನೇನೋ ವಿಷಯಗಳನ್ನು ಬಡಬಡಿಸಿದರು. ತುಸು ಹೊತ್ತಾದ ಕೂಡಲೇ ಮಗುವನ್ನು ಬಲವಂತವಾಗಿ ಒಳಗೆ ಎಳೆದೊಯ್ದರು. ನಾನು ಯಾಕಾದರೂ ಅಲ್ಲಿಗೆ ಹೋದೆನೋ ಎಂದುಕೊಳ್ಳುತ್ತ ಅಲ್ಲಿಂದ ಹೊರ ಬಿದ್ದೆ.

ಇದು ಒಂದು ಉದಾಹರಣೆ ಮಾತ್ರ. ಇಂದು ನಾವು ಭವ್ಯವಾದ ಮನೆಗಳನ್ನು ಕಟ್ಟುತ್ತೇವೆ. ಅದ್ದೂರಿ ಗೃಹಪ್ರವೇಶ ಮಾಡುತ್ತೇವೆ. ಮನೆ ಎನ್ನುವುದು ನಮ್ಮೆಲ್ಲರ ವಾಸಸ್ಥಾನ ಮತ್ತು ನಂಟುತನದ ಬೆಳವಣಿಗೆಯ ಸ್ಥಾನವೂ ಆಗಿರಬೇಕು. ಆದರೆ ಇಂದು ಹಾಗೆ ಆಗುತ್ತಿದೆಯೇ?

